# ದಾಂಪತ್ಯ ಗೀತೆ

ಸಾಸಿವೆಯ ಡಬ್ಬಿ
ಹುಡುಕುತ್ತಿ,
ಒಗ್ಗೆರಣೆಗಿಟ್ಟ ಸೌಟು ತಳಹತ್ತಿ
ಘಾಟು
ಕುಡಿಯುವುದು ರೂಮು ತುಂಬಿದ ಸಿಗರೇಟು ವಾಸನೆ.

ನಿನ್ನ ಸಿಟ್ಟು ಸುಡುಕಿಗೆ ಸಿಕ್ಕಿ
ನೆಲದ ಮೇಲೆ
ಪುಟಿದು ಉರುಳಿ ನೆಗ್ಗಾಗಿ
ಅಳುವುದು
ಕರುಣೆಗೆ ಎರವಾದ ಅನಾಥ ಶಿಶು.

ನೀನು ನನ್ನ ಜೇಬಿನಿಂದ
ಸೀರೆಗೆ
ನಾನು ಸಾಸಿವೆ ಡಬ್ಬಿಯಿಂದ
ಸಿಗರೇಟಿಗೆ
ಕದ್ದರೂ ದೂರು ದಾವೆಯಿಲ್ಲ ನ್ಯಾಯಕ್ಕೆ.

ಹರಿದು ಹೋಗುವ ಸೀರೆ
ಸುಟ್ಟ
ಸಿಗರೇಟಿನ ಬೂದಿ
ಸೇರುವುದು
ಬೀದಿ ಬದಿಯ ಕಸದ ತೊಟ್ಟಿ.

ನಿನ್ನ
ಸಿಟ್ಟಿನ ಹಬೆ
ನನ್ನ ಸಿಗರೇಟು ಹೊಗೆ
ಏರದು
ಎಂದಿಗೂ ಬಾನವರೆಗೆ.



● ಸ. ರಘುನಾಥ

ಕಲೆ: ವಾಗೀಶ ಹೆಗಡೆ